ಬೆಂಗಳೂರು ನಗರದಲ್ಲಿ ನೀರಿನ ಸರಬರಾಜು

211 (306) ಶ್ರೀ ರಾಮಲಿಂಗಾರೆಡ್ಡಿ (ಬಿ.ಟಿ.ಎಂ. ಲೇಔಟ್) : ಮಾನ್ಯ ವಸತಿ, ವಾರ್ತಾ ಮಾಹಿತಿ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಇರತಕ್ಕ ನೀರಿನ ಸಂಪರ್ಕ ಎಷ್ಟು;

ಆ) ಬೆಂಗಳೂರು ನಗರದಲ್ಲಿ ಪ್ರತಿದಿನ ಇರತಕ್ಕ ನೀರಿನ ಬೇಡಿಕೆ ಪ್ರಮಾಣವೆಷ್ಟು;

ಇ) ಕಳೆದ 2 ವರ್ಷಗಳಿಂದ ಎಷ್ಟು ಹೊಸ ಸಂಪರ್ಕ ನೀಡಲಾಗಿದೆ;

ಈ) ಪ್ರತಿದಿನ ಸರಬರಾಜಾಗುತ್ತಿರುವ ನೀರಿನ ಪ್ರಮಾಣವೆಷ್ಟು;

ಉ) ಬೆಂಗಳೂರು ನಗರದಲ್ಲಿ ಅನಧಿಕೃತವಾಗಿ ನೀರಿನ ಸಂಪರ್ಕ ಪಡೆದುಕೊಂಡಿರುವವರ ಸಂಖ್ಯೆ ಎಷ್ಟು;

ಊ) ಬೆಂಗಳೂರು ನಗರದ ಜನತೆಯ ನೀರಿನ ಬೇಡಿಕೆ ಪೂರೈಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ವಸತಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು) :

ಅ) ಬೆಂಗಳೂರು ನಗರದಲ್ಲಿ ದಿನಾಂಕ: 31.1.2010 ರ ಅಂತ್ಯಕ್ಕೆ 5,67,000 ಸಂಪರ್ಕಗಳು ಇರುತ್ತವೆ.

ಆ) ಬೆಂಗಳೂರು ನಗರದಲ್ಲಿ ದಿನಂಪ್ರತಿ ನೀರಿನ ಬೇಡಿಕೆ ಸುಮಾರು 1125 ದಶ ಲಕ್ಷ ಲೀಟರ್ ಪ್ರಮಾಣದಷ್ಟಿರುತ್ತದೆ.

ಇ) ಕಳೆದ 2 ವರ್ಷಗಳಿಂದ 88,000 ನೀರಿನ ಸಂಪರ್ಕಗಳನ್ನು ಮಂಜೂರು ಮಾಡಿರುತ್ತದೆ.

ಈ) ಬೆಂಗಳೂರು ನಗರಕ್ಕೆ ದಿನಂಪ್ರತಿ ಸರಬರಾಜಾಗುತ್ತಿರುವ ನೀರಿನ ಸರಾಸರಿ ಪ್ರಮಾಣ 900 ದಶ ಲಕ್ಷ ಲೀಟರ್.

ಉ) ಬೆಂಗಳೂರು ನಗರದಲ್ಲಿ ಸುಮಾರು 30,000 ಅನದೀಕೃತ ನೀರಿನ ಸಂಪರ್ಕವಿರುತ್ತದೆ.

ಊ) ಬೆಂಗಳೂರು ನಗರಕ್ಕೆ ನೀರಿನ ಸೌಲಭ್ಯವನ್ನು ಉತ್ತಮ ಪಡಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ.

1. ನಗರದಲ್ಲಿ ಹಾಲಿ ಚಾಲ್ತಿಯಲ್ಲಿರುವ 5,594 ಕೊಳವೆ ಬಾವಿಗಳ ಹೊರತಾಗಿ ಹೊಸದಾಗಿ 1,679 ಕೊಳವೆ

ಬಾವಿಗಳಿಂದ ನೀರು ಸರಬರಾಜು ಮಾಡಲಾಗುತ್ತಿರುತ್ತದೆ. ಇದಕ್ಕೆ ಪೂರಕವಾಗಿ ಇನ್ನೂ 500 ಹೊಸ ಕೊಳವೆ ಬಾವಿಗಳನ್ನು ಕೊರೆದು ನೀರು ಪೂರೈಕೆ ಮಾಡುವ ಕೆಲಸ ಪ್ರಗತಿಯಲ್ಲಿದೆ.

2. ವಾಣಿಜ್ಯ ಸಂಕೀರ್ಣ ಬಹುಮಹಡಿ ಗೃಹಸಮುಚ್ಚಯ ಬೃಹತ್ ಕಟ್ಟಡಗಳಿಗೆ ಹೊಸ ನೀರಿನ ಸಂಪರ್ಕ ಮಂಜೂರು ಮಾಡುವ ಸಮಯದಲ್ಲಿ ಒಳಚರಂಡಿ ನೀರು ಸಂಸ್ಕರಣಾ ಘಟಕ ಸ್ಥಾಪಿಸಿರುವುದನ್ನು ಕಡ್ಡಾಯ ಮಾಡಲಾಗಿದೆ. ಇದರಿಂದ ಶುದ್ಧ ನೀರಿನ ಬೇಡಿಕೆ ಮೇಲೆ ಒತ್ತಡ ಕಡಿಮೆಯಾಗುತ್ತದೆ.
3. ನಗರದ ಹೊರ ವಲಯದಲ್ಲಿರುವ ಕೆರೆಗಳನ್ನು ಪುನಶ್ಚೇತನಗೊಳಿಸಿ, ಮಳೆ ನೀರು ಶೇಖರಿಸಿ ಉಪಯೋಗಿಸಿಕೊಳ್ಳಲಾಗುವುದು.
4. ಮಲಿನ ನೀರನ್ನು ತೃತೀಯ ದರ್ಜೆಗೆ ಸಂಸ್ಕರಿಸಿ ತೋಟಗಾರಿಕೆ, ನೆಲ ಶುಚಿಗೊಳಿಸಲು ಇತರೆ ಕೆಲಸಗಳಿಗೆ ಉಪಯೋಗಿಸಲು ಜಲಮಂಡಳಿಯ ಸಂಸ್ಕರಣಾ ಘಟಕಗಳಿಂದ ಸರಬರಾಜು ಮಾಡಲಾಗುತ್ತಿರುತ್ತದೆ.

ಕೃಷ್ಣದೇವರಾಯರ ಪಟ್ಟಾಭಿಷೇಕ ಮಹೋತ್ಸವ

213 (308) ಶ್ರೀ ರಾಮಲಿಂಗಾ ರೆಡ್ಡಿ (ಬಿ.ಟಿ.ಎಂ. ಲೇಔಟ್) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶ್ರೀ ಕೃಷ್ಣದೇವರಾಯರ 500ನೇ ವರ್ಷದ ಪಟ್ಟಾಭಿಷೇಕ ಮಹೋತ್ಸವಕ್ಕೆ ಸರ್ಕಾರ ಖರ್ಚು ಮಾಡಿದ ಹಣವೆಷ್ಟು;

ಆ) ಉತ್ತರ ಕರ್ನಾಟಕದ ಭಾಗಗಳಲ್ಲಿ ಪ್ರವಾಹದಿಂದ ನೊಂದ ಸಂತ್ರಸ್ಥರಿಗೆ ಮನೆಗಳನ್ನು ಕಟ್ಟಿಸಿಕೊಡಲು ಈ ಹಣವನ್ನು ಖರ್ಚುಮಾಡ ಬಹುದಾಗಿತ್ತಲ್ಲವೇ;

ಇ) 2009ರಲ್ಲಿ ಕನ್ನಡ ರಾಜ್ಯೋತ್ಸವವನ್ನು ಆಚರಿಸದ ಸರ್ಕಾರ ಈ ಸಮಾರಂಭವನ್ನು ಅದ್ದೂರಿಯಾಗಿ ಆಚರಿಸಲು ಕಾರಣಗಳೇನು;

ಈ) ಈ ಸಮಾರಂಭದಿಂದ ರಾಜ್ಯಕ್ಕೆ ಉಂಟಾದ ಲಾಭವೇನು?